## ಕಾಳಿ ಕಾಡಿನ ತ್ರಿಪುರ ಸುಂದರಿ

# ಚಿಟ್ಟು ಗಿಳಿ

■ ಚಿತ್ರ– ಲೇಖನ: **ಪುಟ್ಟರಾಜು ಕೈಗಾ**









**ಚಿ**ಟ್ಟುಗಿಳಿ ಎಂದು ಕರೆಯುವ ಕನ್ನಡ ನಾಡಿನ ಅತಿ ಪುಟ್ಟ ಗಿಳಿ ಇದು. ಗುಬ್ಬಿಯಷ್ಟು ಚಿಕ್ಕದಾದ ಹಕ್ಕಿ. ಗಿಳಿ ಹಸಿರು ಬಣ್ಣ, ದುಂಡು ದೇಹ, ಚೋಟುದ್ದದ ಚೌಕಾಕಾರದ ಪುಟ್ಟ ಹಸಿರು ಗಿಳಿಗೆ ಚಿಟ್ಟುಗಿಳಿ ಎನ್ನುವ ಹೆಸರು ಒಪ್ಪುವಂಥದೇ.

ಈ 'ಲುಕ್' ಕೊಡೊ ಚಿಟ್ಟು ಗಿಳಿ ಕಾಳಿ ಕಣಿವೆಯ ಕಾಡಿನ ತ್ರಿಪುರ ಸುಂದರಿ. ಇದರ ಕೆಲವು ವಿಶೇಷ ಗುಣಗಳಿವೆ. ಬೇಗನೆ ಸಿಟ್ಟಿಗೇಳುವ, ರೇಗುವ, ಸಿಟ್ಟು ಬಂದಾಗ ರೆಕ್ಕೆ ಪುಕ್ಕ ಎಲ್ಲವನ್ನೂ ಅಗಲಿಸಿ ಕೆಕ್ಕರಿಸುವ ಇದರ ನೋಟವೇ ವಿಶೇಷ. ನಿಮಿಷಕೊಮ್ಮೆ ಕೂಗುವ, ಕತ್ತನ್ನು ಕೊಂಕಿಸಿ ಆಚೀಚೆ ತಿರುಗಿಸುತ್ತಾ ಲುಕ್